**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>**
**<u>ಬೆಂಗಳೂರು</u>**

**ಸಿಸಿ ನಂ. 12723/2020 ಚಾಸಾಃ 4 ಪ್ರಾಸಾಃ 4**

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಜೇಶ್ ಆರ್. |
| ತಂದೆಯ ಹೆಸರು | : | ರಮಣ ಕೆ |
| ವಯಸ್ಸು | : | 40 ವರ್ಷ |
| ವೃತ್ತಿ | : | ಮಾರ್ಕೇಟಿಂಗ್ |
| ವಾಸ | : | ಶ್ರೀನಿವಾಸನಗರ, ಬೆಂಗಳೂರು |

**<u>ಸಾಕ್ಷಿಯನ್ನು ದಿಃ 27.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸ.ಸ.ಅ ರವರಿಂದಃ-</u>**

ನಾನು ಕಳೆದ 20 ವರ್ಷಗಳಿಂದ ವಿಜಯ್ ಜೇಮ್ಸ್ ಅಂಡ್ ಜ್ಯುವಲರಿ ಕಂಪನಿ, ಗಾಂಧಿನಗರದಲ್ಲಿ ಮಾರ್ಕೆಟಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ. ನಾವು ಆರೋಪಿಗೆ ಚಿನ್ನ ಕೊಟ್ಟಾಗ ಅವರು ಜ್ಯುವೆಲರಿ ಮಾಡಿ ನಮಗೆ ನೀಡುತ್ತಿದ್ದರು. ನಮ್ಮ ಜ್ಯುವಲರಿ ಶಾಪ್ 05 ಮಹಡಿಗಳಿದ್ದು ಅದರಲ್ಲಿ 04ನೇ ಮಹಡಿ ಆರೋಪಿ 40-45 ಜನರನ್ನು ಕುಳಿತುಕೊಂಡು ಅವರಿಂದ ಕೆಲಸ ಮಾಡಿಸುತ್ತಿದ್ದರು. ಟ್ರೆಡಿಷನಲ್ ಸೆಟ್ಟಿಂಗ್ ಅಂದರೆ ಹಳೆಯ ಶೈಲಿಯ ವಜ್ರ ಆಭರಣ ಕೆಲಸವನ್ನು ಆರೋಪಿಯಿಂದಲೇ ಮಾಡಿಸುತ್ತಿದ್ದೇವು. ಬೇರೆ ಯಾರಿಂದಲೂ ನಾವು ಆ ಕೆಲಸವನ್ನು ಮಾಡಿಸುತ್ತಿರಲಿಲ್ಲ. ಹಲವಾರು ವರ್ಷಗಳಿಂದ ಆರೋಪಿಗೆ ಚಿನ್ನ ಕೊಡುತ್ತಿದ್ದು ಅವರು ಜ್ಯುವಲರಿ ಮಾಡಿ ಕೊಡುತ್ತಿದ್ದುರಿಂದ ನಂಬಿಕೆ ಇತ್ತು. 5 ಗ್ರಾಂ ಉಂಗುರ ಮಾಡಬೇಕಾದರೆ ಅಂದಾಜು 20 ಗ್ರಾಂ ಚಿನ್ನವನ್ನು ಕೊಡಬೇಕು. ಆ ರೀತಿ ನಾವು ಅಂದಾಜು 10 ಕೆ.ಜಿ. ಚಿನ್ನವನ್ನು ಆರೋಪಿಗೆ ನೀಡಿದ್ದೆವೆ. ಅದರಲ್ಲಿ 5.5 ಕೆ.ಜೆ ರಷ್ಟು ಚಿನ್ನದ ಒಡವೆಗಳನ್ನು ಮಾಡಿ ಕೊಟ್ಟಿದ್ದಾರೆ. ಉಳಿಕೆ 4.5 ಕೆ.ಜಿ. ಚಿನ್ನದ ಆಭರಣವನ್ನು ಆರೋಪಿಯಿಂದ ಬಂದಿಲ್ಲ. ಜನವರಿ-20 ರಿಂದ ಆರೋಪಿ ತುಂಬ ಸಮಯ ಗೈರು ಹಾಜರಿದ್ದರು. ಫೋನ್ ಮಾಡಿದರು ಆರೋಪಿ ಫೋನ್ ಕರೆ

ಸ್ವೀಕರಿಸುತ್ತಿರಲಿಲ್ಲ. ಸ್ವತಃ ನಾನೇ ಆರೋಪಿಯ ಮನೆಗೆ ಹೋಗಿ ಬಂದಿದ್ದೇನೆ. ಆರೋಪಿ ಮನೆಯಲ್ಲಿ ಇರಲಿಲ್ಲ. ಈ ಬಗ್ಗೆ ನಾನು ಮಾಲೀಕರಿಗೆ ತಿಳಿಸಿದೆನು. ಮಾಲೀಕರು ಕೂಡ ಆರೋಪಿಗೆ ಫೋನ್ ಮಾಡಿದರು. ಆ ನಂತರ ನಾನು ಮತ್ತು ನಮ್ಮ ಮಾಲೀಕರಾದ ಸುನೀಲ್ ಕುಮಾರ್ ರವರು ಉಪ್ಪಾರ ಪೇಟೆ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇವೆ. ಆರೋಪಿ 4.5 ಕೆ.ಜಿ. ಚಿನ್ನವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಆ ನಂತರ ಪೊಲೀಸರು ಜ್ಯುವೆಲರಿ ಶಾಪಿಗೆ ಬಂದು ಪಂಚನಾಮೆ ಮಾಡಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಹೆಚ್.ವಿ.ಎಸ್. ವಕೀಲರಿಂದಃ</u>**

ಸುಮಾರು 15 ವರ್ಷಗಳಿಂದ ಆರೋಪಿ ಅಲ್ಲಿ ಕೆಲಸ ಮಾಡುತ್ತಿದ್ದರು. 2014 ನೇ ಇಸವಿಯಲ್ಲಿ ವಿಜಯ್ ಜೇಮ್ಸ್ ಅಂಡ್ ಜ್ಯುವಲರಿ ಕಂಪನಿ, ಗಾಂಧಿನಗರದಲ್ಲಿ ಅದರ ಮಾಲೀಕರು ಪ್ರಾರಂಭಿಸಿದ್ದರು ಎಂದರೆ ಸರಿ. ಈಗ ಎರಡು ಸೈಟುಗಳ ಅಕ್ಕಪಕ್ಕದಲ್ಲಿ ವಿಜಯ್ ಜೇಮ್ಸ್ ಅಂಡ್ ಜ್ಯುವಲರಿ ಕಂಪನಿಯನ್ನು ಗಾಂಧಿನಗರದಲ್ಲಿ ಕಟ್ಟಿದ್ದಾರೆ. ನೆಲ ಮಹಡಿ ರೆಸ್ಪಷನ್ ಕೌಂಟರ್ ಮತ್ತು ಲಿಫ್ಟ್ ಮತ್ತು ಮೇಲುಗಡೆ ಮಹಡಿಗೆ ಹೋಗಲು ಮೆಟ್ಟಿಲುಗಳು ಇರುವ ಜಾಗ ಎಂದರೆ ಸರಿ.

ಪ್ರಃನೆಲ ಮಹಡಿಯ ರಿಸ್ಪೆಷನ್ ಕೌಂಟರ್ ಗೆ ಹೋಗುವ ಮುಂಚೆ ಸ್ಕ್ಯಾನರ್, ಪಂಚಿಂಗ್, ಮೆಟಲ್ ಸ್ಕ್ಯಾನರ್ ಹಾಗೂ ಸಿಸಿಟಿವಿ ಇದೆ?

ಉಃ ಪಂಚಿಂಗ್, ಬಯೋಮೆಟ್ರಿಕ್ ಹಾಗೂ ಸಿಸಿಟಿವಿ ಇದೆ. ಬಯೋಮೆಟ್ರಿಕ್ ನಲ್ಲಿ ಥಂಬ್ ಇಂಪ್ರೆಷನ್ ಸಂಬಳ ತೆಗೆದುಕೊಳ್ಳುವ ಕೆಲಸಗಾರರಿಗೆ ಮಾತ್ರ ಇದೆ.

ಆ ಸಿಸಿಟಿವಿಯಲ್ಲಿ 24 x7 ದೃಶ್ಯಗಳು ರೆಕಾರ್ಡ್ ಆಗುತ್ತದೆ. ವಿಜಯ್ ಜೇಮ್ಸ್ ಅಂಡ್ ಜ್ಯುವಲರಿ ಕಂಪನಿ, ಗಾಂಧಿನಗರ ಯಾರೇ ಹೋಗಿ ಬಂದರು ಆ ಸಿಸಿಟಿವಿಯಲ್ಲಿ ರೆಕಾರ್ಡ್ ಆಗುತ್ತದೆ ಎಂದರೆ ಸರಿ. ವಿಜಯ್ ಜೇಮ್ಸ್ ಅಂಡ್ ಜ್ಯುವಲರಿ ಕಂಪನಿಯ ಮಾಲೀಕರು ಎರಡು ಮೂರು ಕಡೆ ಜ್ಯುವಲರಿ ಶಾಪ್

ಹೊಂದಿದ್ದು 2014 ರಲ್ಲಿ ಗಾಂಧಿನಗರದಲ್ಲಿ ಜ್ಯುವಲರಿ ಶಾಪ್ ವರ್ಗಾವಣೆ ಮಾಡಿಕೊಂಡು ಬಂದಿದ್ದರು ಎಂದರೆ ಸರಿ. ನಮ್ಮ ಮಾಲೀಕರು ಚಿನ್ನ ಮತ್ತು ವಜ್ರದ ವ್ಯಾಪಾರದಲ್ಲಿ ಪರಿಣಿತರು ಎಂದರೆ ಸರಿ. ನಮ್ಮ ಮಾಲೀಕರು ಅವರ ತಂದೆಯ ಕಾಲದಿಂದಲೂ ಜ್ಯುವಲರಿ ಶಾಪ್ ನಡೆಸುತ್ತಿದ್ದರು ಎಂದರೆ ಸರಿ. ತಂದೆಯ ಕಾಲದಿಂದಲೂ ಜ್ಯುವಲರಿ ಶಾಪ್ ನಡೆಸಿ ಅನುಭವ ಇರುವುದರಿಂದ ನಮ್ಮ ಮಾಲೀಕರಿಗೆ ಭದ್ರತೆ ಯಾವ ರೀತಿ ಮಾಡಬೇಕೆಂದು ಚೆನ್ನಾಗಿ ಅರಿವಿದೆ ಎಂದರೆ ಸರಿ. 2014 ರಲ್ಲಿ ವಿಜಯ್ ಜೇಮ್ಸ್ ಅಂಡ್ ಜ್ಯುವಲರಿ ಕಂಪನಿ, ಗಾಂಧಿನಗರದಲ್ಲಿ ಪ್ರಾರಂಭವಾದಾಗ ನಾನು ಕೆಲಸಕ್ಕೆ ಸೇರಿರಲಿಲ್ಲ ಎಂದರೆ ಸುಳ್ಳು. ಜ್ಯುವಲರಿ ಶಾಪ್ ನಲ್ಲಿ ಸಾಮಾನ್ಯವಾಗಿ ಮೆಟಲ್ ಸ್ಕ್ಯಾನರ್ ಅಳವಡಿಸುವ ಪದ್ದತಿ ಇದೆ ಎಂದರೆ ಸರಿ. ಚಿನ್ನ ಬೆಳ್ಳಿ ಅಮೂಲ್ಯವಾದ ವಸ್ತುಗಳಾದ ಕಾರಣ ಯಾರದರು ತೆಗೆದುಕೊಂಡು ಹೋದರೆ ಅದು ಪತ್ತೆ ಆಗಲೀ ಎಂದು ಮೆಟಲ್ ಸ್ಕ್ಯಾನರ್ ಅಳವಡಿಸಿರುತ್ತಾರೆ ಎಂದರೆ ಸರಿ. ಮೆಟಲ್ ಸ್ಕ್ಯಾನರ್ ಅನ್ನು ಅಂದಾಜು 2021ನೇ ವರ್ಷದಲ್ಲಿ ಅಳವಡಿಸಲಾಗಿದೆ. ಆದರೆ ನಿಖರವಾಗಿ ಯಾವಾಗ ಮೆಟಲ್ ಸ್ಕ್ಯಾನರ್ ಅನ್ನು ಅಳವಡಿಸಲಾಗಿದೆ ಎಂದು ಹೇಳಲು ಸಾಧ್ಯವಿಲ್ಲ.

2014ನೇ ಇಸವಿಯಲ್ಲಿ ಜ್ಯುವಲರಿ ಶಾಪ್ ಆರಂಭವಾದಾಗಲೇ ಮೆಟಲ್ ಸ್ಕ್ಯಾನರ್ ಅಳವಡಿಸಿದರು ಎಂದರೆ ಸುಳ್ಳು. ನಾನು ಈ ಜ್ಯುವಲರಿ ಶಾಪ್ ನಲ್ಲಿ ಸೀನಿಯರ್ ಸೇಲ್ಸ್ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದರೆ ಸರಿ. ನನ್ನ ಕರ್ತವ್ಯ ಸೇಲ್ಸ್ ಗೆ ಸಂಬಂಧಿಸಿದ್ದು ಮಾತ್ರ ಇರುತ್ತದೆ ಎಂದರೆ ಸರಿ. ನನ್ನ ಕರ್ತವ್ಯ ನಿರ್ವಹಿಸುತ್ತಿದ್ದ ಸೇಲ್ಸ್ ಕೌಂಟರ್ 1ನೇ ಮಹಡಿಯಲ್ಲಿದೆ ಎಂದರೆ ಸರಿ. 2ನೇ ಮಹಡಿಯಲ್ಲಿ ಚಿನ್ನ ತೆಗೆದುಕೊಳ್ಳುವ ಮತ್ತು ಕೊಡುವ ಅಕೌಂಟ್ ಕೌಂಟರ್ ಇದೆ ಎಂದರೆ ಸರಿ. ಯಾರಿಗೆ ಚಿನ್ನ ಕೊಡಬೇಕದರೂ ಅಕೌಂಟ್ ಕೌಂಟರ್ ನಲ್ಲಿರುವ ಬುಕ್ ನಲ್ಲಿ ದಿನಾಂಕ, ಚಿನ್ನದ ತೂಕ ಇತ್ಯಾದಿಯನ್ನು ನಮೂದಿಸಿ ಕೊಡುತ್ತಾರೆ ಎಂದರೆ ಸರಿ. ಕೆಲಸಗಾರರಿಗೆ ಚಿನ್ನ ಕೊಟ್ಟ ಬಗ್ಗೆ ಆ ಲೆಡ್ಜರ್ ಹೊರತು ಪಡಿಸಿ ಬೇರೆ ದಾಖಲೆ ಇರುವುದಿಲ್ಲ ಎಂದರೆ ಸರಿ. ಆ ಅಕೌಂಟ್ ಬುಕ್ ಯಾವಾಗಲೂ ನಮ್ಮ

ಜ್ಯುವಲರಿ ಶಾಪ್ ನಲ್ಲಿ ಲಭ್ಯ ಇರುವ ದಾಖಲೆ ಎಂದರೆ ಸರಿ.

2ನೇ ಮಹಡಿಯಲ್ಲಿ ಯಾರಿಗೆ ಎಷ್ಟು ಚಿನ್ನ ಕೊಡುತ್ತಾರೆ ಎಂದು ನನಗೆ ಖುದ್ದಾಗಿ ಗೊತ್ತಿರುವುದಿಲ್ಲ ಎಂದರೆ ಸರಿ. ಈ ಕೇಸಿನ ವಿಚಾರದಲ್ಲಿ ಮಾಲೀಕರು ಹೇಳಿದ ಮೇಲೆ ಗೊತ್ತಾಯಿತು ಎಂದರೆ ಸರಿ. ಸಾಕ್ಷಿ ಸ್ವತಃ ಅಕೌಂಟ್ಸ್ ರವರು ಮಾಲೀಕರಿಗೆ ಹೇಳಿರುತ್ತಾರೆ, ಮಾಲೀಕರು ನನಗೆ ಹೇಳಿದ್ದಾರೆ ಎಂದರೆ ಸರಿ. ಯಾವ ದಿನಾಂಕ ಮತ್ತು ತಿಂಗಳು ವಿಚಾರ ನನಗೆ ಗೊತ್ತಾಯಿತು ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿ.

ಯಾವ ರೀತಿ ಡಿಸೈನ್ ಬೇಕು ಎಂದು ಗ್ರಾಹಕರು ಮಾಲೀಕರಿಗೆ ಹೇಳಿದಾಗ ಮಾಲೀಕರು ಆ ಡಿಸೈನ್ ನ ಆಭರಣ ಮಾಡಿಕೊಡುವಂತೆ ತಯಾರಿಕರಿಗೆ ಒಪ್ಪಿಸುತ್ತಾರೆ ಎಂದರೆ ಸರಿ. 3ನೇ ಮಹಡಿಯಲ್ಲಿ ಡಿಸೈನ್ ಕಾಸ್ಟಿಂಗ್ ಮಾಡಲು ಮೆಶನರಿ ಇದೆ ಎಂದರೆ ಸರಿ. ನಮ್ಮ ಮಾಲೀಕರಿಗೆ ಸಂಬಂಧಿಸಿದ ಕಾರ್ಮಿಕರು ಡಿಸೈನ್ ಕಾಸ್ಟಿಂಗ್ ಮಾಡುತ್ತಾರೆ ಎಂದರೆ ಸರಿ. ಅಲ್ಲಿ ಗಟ್ಟಿ ಚಿನ್ನವನ್ನು ಕರಗಿಸಿ ಡಿಸೈನ್ ಕಾಸ್ಟಿಂಗ್ ಮಾಡುತ್ತಾರೆ ಎಂದರೆ ಸರಿ. ಡಿಸೈನ್ ಕಾಸ್ಟಿಂಗ್ ಮಾಡುವ ಮಹಡಿಗೆ ಆರೋಪಿಗೆ ಪ್ರವೇಶ ಇಲ್ಲ ಎಂದರೆ ಸುಳ್ಳು. ಡಿಸೈನ್ ಕಾಸ್ಟಿಂಗ್ ಮೆಶಿನ್ ಆಪರೇಟಿಂಗ್ ಬೇರೆಯವರು ಮಾಡುತ್ತಾರೆ. ಡಿಸೈನ್ ಕಾಸ್ಟಿಂಗ್ ಆದ ಮೇಲೆ ಉಳಿದ ಕೆಲಸ ಮಾಡಲು ಆರೋಪಿಗೆ ಕಾಸ್ಟಿಂಗ್ ಆದ ಆಭರಣ ಕೊಡುತ್ತಾರೆ ಎಂದರೆ ಸರಿ. ಆ ನಂತರ ಆರೋಪಿ ಉಳಿದ ಕೆಲಸವನ್ನು ಮಾಡಿ ಆಭರಣವನ್ನು 2ನೇ ಮಹಡಿಯ ಕೌಂಟರ್ ಗೆ ಕೊಡುತ್ತಾರೆ. ಆ ಸಮಯದಲ್ಲಿ 2ನೇ ಮಹಡಿಯ ಅಕೌಂಟ್ಸ್ ನವರು ತಯಾರಿಸಿದ ಆಭರಣವನ್ನು ತೂಕ ಮಾಡಿ ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ನನಗೆ ತಿಳಿದ ಪ್ರಕಾರ ಆರೋಪಿಗೆ ಮೇಕಿಂಗ್ ಚಾರ್ಜ್ ಮಾತ್ರ ಕೊಡುತ್ತಿದ್ದರು ಎಂದರೆ ಸರಿ. 1 ರಿಂದ 30ನೇ ತಾರೀಖನವರಿಗೆ ಆರೋಪಿ ಎಷ್ಟು ಕೆಲಸ ಮಾಡಿದ್ದಾರೆ ಎಂದು ನೋಡಿ ಅವರಿಗೆ ಅಕೌಂಟ್ಸ್ ನಿಂದ ಬ್ಯಾಂಕ್ ವರ್ಗಾವಣೆ ಅಥವಾ ಚೆಕ್ ಮೂಲಕ ಹಣವನ್ನು ಕೊಡುವುದು ಪದ್ದತಿ ಆಗಿತ್ತು. ಆರೋಪಿ ಯಾವ ತಿಂಗಳು ಎಷ್ಟು ಕೆಲಸ ಮಾಡಿದ್ದಾರೆ ಮತ್ತು ಎಷ್ಟು ಮೇಕಿಂಗ್

ಚಾರ್ಜ್ ಕೊಟ್ಟಿದ್ದಾರೆ ಎಂದು ಬುಕ್ಸ್ ಆಫ್ ಅಕೌಂಟ್ ನಲ್ಲಿ ಇದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಯಾರು ಚಿನ್ನಭರಣ ಕೆಲಸ ಮಾಡುತ್ತಾರೋ ಅವರಿಗೆ ವೆಸ್ಟೇಜ್ ಕೊಡುತ್ತಾರೆ. ಆ ವೆಸ್ಟೇಜ್ ಅನ್ನು ಆಭರಣ ತಯಾರಿಕ ಮಾಡುವವರ ಕೆಲಸ ಮಾಡುವವರ 40 ರಿಂದ 45 ಜನ ಕೊಡಲಾಗುತ್ತದೆ ಎಂದರೆ ಸಾಕ್ಷಿ ಆಭರಣ ತಯಾರಿಕರಿಗೆ ವೇಸ್ಟೇಜ್ ಕೊಡುತ್ತೇವೆ ಅದನ್ನು ಅವರು ಯಾರು ಮಾಡುತ್ತಾರೋ ಗೊತ್ತಿಲ್ಲ ಎಂದು ಹೇಳುತ್ತಾರೆ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿಗೆ 10 ಕೆ.ಜಿ. ಚಿನ್ನ ಕೊಟ್ಟಿದ್ದರೆ ಹಾಗೂ ಆರೋಪಿ ವಾಪಸ್ಸು ಒಡೆವಗಳನ್ನು ಮಾಡಿಕೊಟ್ಟಿದ್ದರು ಅದು ಬುಕ್ಸ್ ಆಫ್ ಅಕೌಂಟ್ ನಲ್ಲಿ ಕಂಡು ಬರುತ್ತದೆ ಎಂದರೆ ಸರಿ.

2014-17 ರವರೆಗೆ ಮಾತ್ರ ಆರೋಪಿ ನಮ್ಮ ಜ್ಯುವಲರಿ ಶಾಪ್ ನಲ್ಲಿ ಕೆಲಸ ಮಾಡಿದ್ದು ನಂತರ ಬಿಟ್ಟು ಹೋಗಿದ್ದಾರೆ ಎಂದರೆ ಗೊತ್ತಿಲ್ಲ. ಈಗಲೂ ನಾನು ಅದೇ ಜ್ಯುವಲರಿ ಶಾಪ್ ನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದ ಚಿನ್ನವನ್ನು ಮಾಲೀಕರು ಇನ್ಸುರೆನ್ಸ್ ಮೂಲಕ ಕ್ಲೇಮು ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಮತ್ತು ಮಾಲೀಕರು ಉಪ್ಪಾರಪೇಟೆ ಪೊಲೀಸರಿಗೆ ದೂರು ಕೊಡಲು ಹೋಗಿದ್ದೆನು. ಆ ನಂತರ ಎಷ್ಟು ಬಾರಿ ನಾನು ಆ ಪೊಲೀಸ್ ಠಾಣೆಗೆ ಹೋಗಿದ್ದೇನೆ ಎಂದು ನೆನಪಿಲ್ಲ. ಮೊಬೈಲ್ ಸಂ.9611155415 ಹಾಗೂ 9741007489 ಅನ್ನು ನನ್ನಲ್ಲಿ ಇದ್ದು ಅವುಗಳನ್ನು ನಾನು ಉಪಯೋಗಿಸುತ್ತಿದ್ದೇನೆ.

ನಾನು ಕಳೆದ 20 ವರ್ಷಗಳಿಂದ ವಿಜಯ್ ಜೇಮ್ಸ್ ಅಂಡ್ ಜ್ಯುವಲರಿ ಕಂಪನಿ, ಗಾಂಧಿನಗರದಲ್ಲಿ ಮಾರ್ಕೆಟಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೋ ಇಲ್ಲವೋ ನೆನಪಿಲ್ಲ.

5 ಗ್ರಾಂ ಉಂಗುರ ಮಾಡಬೇಕಾದರೆ ಅಂದಾಜು 20 ಗ್ರಾಂ ಚಿನ್ನವನ್ನು ಕೊಡಬೇಕು. ಆ ರೀತಿ ನಾವು ಅಂದಾಜು 10 ಕೆ.ಜಿ. ಚಿನ್ನವನ್ನು ಆರೋಪಿಗೆ ನೀಡಿದ್ದೆವೆ. ಅದರಲ್ಲಿ 5.5 ಕೆ.ಜೆ ರಷ್ಟು ಚಿನ್ನದ ಒಡವೆಗಳನ್ನು ಮಾಡಿ ಕೊಟ್ಟಿದ್ದಾರೆ.

ಉಳಿಕೆ 4.5 ಕೆ.ಜಿ. ಚಿನ್ನದ ಆಭರಣವನ್ನು ಆರೋಪಿಯಿಂದ ಬಂದಿಲ್ಲ ಎಂಬ ವಿಚಾರದ ಬಗ್ಗೆ ಪೊಲೀಸರಿಗೆ ಹೇಳಿಲ್ಲ ಎಂದರೆ ಸರಿ. ನಾನು ಅದೇ ಜ್ಯುವಲರಿ ಅಂಗಡಿಯಲ್ಲಿ ಈಗಲೂ ಕೆಲಸ ಮಾಡುತ್ತಿದ್ದು ನನಗೆ ಪ್ರಕರಣದ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರು ನಾನು ಮಾಲೀಕರ ಪರವಾಗಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಆರೋಪಿಗೆ ಯಾವುದೇ ಚಿನ್ನ ಕೊಟ್ಟಿಲ್ಲ ಹಾಗೂ ಆರೋಪಿ ಬಾಕಿ ಉಳಿಸಿಕೊಂಡು ದುರುಪಯೋಗ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**